# ಕರ್ನಾಟಕ ಸರ್ಕಾರ
# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಡಿಸಿಇ:ಟಿಆರ್‌ಎನ್:01:2022:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20.02.2023

## ಸುತ್ತೋಲೆ

ವಿಷಯ: 2022ರ ಡಿಸೆಂಬರ್ ಮಾಹೆಯಲ್ಲಿ ವರ್ಗಾವಣೆಗೊಂಡ ಬೋಧಕರ ವಿವರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆಯ ದಿನಾಂಕ:31.12.2022ರ ವರ್ಗಾವಣೆ ಆದೇಶ

*****

2022ರ ಡಿಸೆಂಬರ್ ಮಾಹೆಯಲ್ಲಿ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಬೋಧಕರುಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾಯಿಸಿದ್ದು, ಉಲ್ಲೇಖಿತ ಆದೇಶದಲ್ಲಿ ದಿನಾಂಕ:31.01.2023ರಿಂದ ಅನ್ವಯಿಸುವಂತೆ ಮಾತೃ ಕಾಲೇಜನ ಕರ್ತವ್ಯದಿಂದ ಬಿಡುಗಡೆಗೊಳಿಸಿ ದಿನಾಂಕ:01.02.2023ರಿಂದ ವರ್ಗಾವಣೆಗೊಂಡ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುವಂತೆ ಹಾಗೂ ಫೆಬ್ರುವರಿ-2023ರ ವೇತನವನ್ನು ವರ್ಗಾವಣೆಗೊಂಡ ಕಾಲೇಜಿನಿಂದ ಸೆಳೆಯುವಂತೆ ಸೂಚನೆಗಳನ್ನು ನೀಡಲಾಗಿತ್ತು.

ಇಲಾಖೆಯ EMIS ತಂತ್ರಾಂಶವನ್ನು ಪರಿಶೀಲಿಸಲಾಗಿ ವರ್ಗಾವಣೆ ಆದೇಶದಲ್ಲಿನ ಹಲವಾರು ಬೋಧಕರು ವರ್ಗಾವಣೆಗೊಂಡ ಕಾಲೇಜಿನಲ್ಲಿ ವರದಿ ಮಾಡಿಕೊಳ್ಳದೇ ಇರುವುದನ್ನು ಗಮನಿಸಲಾಗಿದೆ. ಪ್ರಯುಕ್ತ ಉಲ್ಲೇಖಿತ ಆದೇಶದನ್ವಯ ವರ್ಗಾವಣೆಗೊಂಡಿರುವ ಬೋಧಕರ ವಿವರಗಳನ್ನು ದಿನಾಂಕ:21.02.2023ರ ಸಂಜೆ 5.00 ಗಂಟೆಯೊಳಗಾಗಿ ಈ ಸುತ್ತೋಲೆಗೆ ಲಗತ್ತಿಸಿರುವ Google Form ನಲ್ಲಿ ಭರ್ತಿ ಮಾಡಿ ಸಲ್ಲಿಸುವಂತೆ ಅಧೀನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಿದೆ. ಈ ಬಗ್ಗೆ ಉದಾಸೀನತೆ ತೋರಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

20/02/2023

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

**ಇವರಿಗೆ**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

**ಪ್ರತಿಯನ್ನು - ಮಾಹಿತಿಗಾಗಿ**

1. ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿನಿರ್ದೇಶಕರುಗಳಿಗೆ
2. ಡಾ.ರಮೇಶ ರೆಡ್ಡಿ.ಎನ್, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು
3. ಕಛೇರಿ ಪ್ರತಿ.

Circular